# ಸ್ಮರಿಸುವ ಜನಕೆಲ್ಲ ಭವ ಭಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 573.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
3. Note: Singer has followed these lyrics.

ರಾಗ: ಸುರುಟಿ ತಾಳ: ಆದಿ

ಸ್ಮರಿಸುವ ಜನಕೆಲ್ಲ ಭವ ಭಯ ಪರಿತಾಪಗಳಿಲ್ಲ || ಪ ||

ಶರಣಾಗತ ಜನ ವತ್ಸಲನೆನಿಸಿದ
ಕರಿಗಿರಿ ದುರ್ಗದ ನರಹರಿ ನಿನ್ನನು || ಅಪ ||

ಪೂರ್ವ ಸುಕೃತದಿಂದ, ಸುಜನಕೆ
ತೋರ್ವೆ ನೀ ಮುದದಿಂದ
ಸಾರ್ವ ಕಾಲದೊಳು ಮಹದಾನಂದದಿ
ದುರ್ವಾಸರು ಪೂಜಿಪ ಮೂರುತಿ ನಿನ್ನ || 1 ||

ಕಾಶಿತೀರ್ಥದಿಂದ ಚಕ್ರ ಪ-
ರಾಶರತೀರ್ಥದಿಂದ
ಲೇಸಾದ ಮಾರುತ ಪಾದತೀರ್ಥ ನರ-
ಕೇಸರಿ ತೀರ್ಥದಿಂದೊಪ್ಪುವ ನಿನ್ನನು || 2 ||

ನೀನಿಹ ಕ್ಷೇತ್ರದೊಳು ಸೇರಿಹ
ವಾನರ ಪಕ್ಷಿಗಳು
ಮಾನವಾದಿ ಬಹು ಪ್ರಾಣಿ ಸಮೂಹಕೆ

ಏನು ಪುಣ್ಯ ಫಲವಿರುವುದೊ ತಿಳಿಯದು || 3 ||

ಅತ್ತಿಯ ಮರದಲ್ಲಿ ಕಾಯ್ಗಳು
ಹತ್ತಿರುವಂದದಲಿ
ಮೊತ್ತಮೊತ್ತವಾದ ಬ್ರಹ್ಮಾಂಡ ನಿನ್ನೊಳು
ಹತ್ತಿಕೊಂಡಿಪ್ಪುದನಂತ ಕೋಟಿಯೆಂದು || 4 ||

ಅಡವಿಯ ಮೃಗಗಳಿಗೆ ಬಹು ಬಗೆ
ಗಿಡ ಲತೆ ಮರಗಳಿಗೆ
ಒಡೆಯ ನೀನಲ್ಲದೆ ಅನ್ನೋದಕಗಳ
ಕೊಡುವರೆ ಮನುಜರು ನೀ ಗತಿ ಸಲಹೆಂದು || 5 ||

ಕ್ಷುದ್ರ ದೈತ್ಯರ ಗಂಡ ಕರುಣ ಸ-
ಮುದ್ರ ತಿಮಿರಚಂಡ
ರೌದ್ರದಿ ಅಸುರರ ಮರ್ದಿಸಿ ಲೋಕೋ-
ಪದ್ರವ ಬಿಡಿಸಿದ ರುದ್ರಾಂತರ್ಗತ ನಿನ್ನ || 6 ||

ಭೂತ ಗ್ರಹಾದಿಗಳು ಸೋಕಿದ
ಭೀತಿ ಜ್ವರಾದಿಗಳು
ಚೇತೋಮುಖ ನಿನ್ನ ನೋಡಲು ಇನ್ನಾ
ಪಾತಕವಳಿದು ಯಾತನೆ ಕಳೆವುದು || 7 ||

ಲಕ್ಷ್ಮೀ ಸಹಿತವಾಗಿ ಭಕ್ತರ
ರಕ್ಷಿಸುವುದಕಾಗಿ
ಲಕ್ಷಣಯುಕ್ತದಿ ಬಂದು ನಿಂದೆ ಶ್ರೀ
ಲಕ್ಷುಮಿನರಸಿಂಹ ನಿನ್ನ ಚರಿತ್ರೆಯ || 8 ||

ಕರಿಗಿರಿ ನರಸಿಂಹ ಭಕ್ತರ
ದುರಿತದಂತಿಸಿಂಹ
ಪರಿಪಾಲಿಸು ನಾ ಮೊರೆಹೊಕ್ಕೆನು ನಿನ್ನ
ಗುರು ಪುರಂದರ ವಿಠ್ಠಲ ನಿನ್ನನು || 9 ||

**Classification:** Keerthane

**Ankita:** purandara vittala

**Location:** NA

**Category:** Jeevanoddhara

**Sub-Category:** smarane, jana, bhava, bhaya, sharana, Narasimha, durvasa, puje, kashi, parashara, pakshi, koti, punya, phala, mara, brahmanda, kaadu, mruga, daitya, pati, karuna, Samudra, asura, loka, shiva, graha, Lakshmi,

**Pravachana:** NA

**Explanation:** NA